ವಿ.ಎಸ್. ಹಿಂದೂಪುರ, ಬಳ್ಳಾರಿ
*ರಾಜಕಾರಣಿಗೆ ರಾಜಕೀಯ ವೈರಾಗ್ಯ ಯಾವಾಗ ಬರುತ್ತದೆ?*



ಚೆಲುವೆಗೆ ಕನ್ನಡಿಯ ವೈರಾಗ್ಯ ಬಂದಾಗ.

ಎಸ್.ಜಿ. ಕರನಂದಿ, ಹುನಗುಂದ
*ಅಂದು ಯುವಕರೆ, ಎದ್ದೇಳಿ ಎಂದು ಕರೆ ನೀಡಿದ ವಿವೇಕಾನಂದರು ಇಂದು ಇದ್ದಿದ್ದರೆ ಮತ್ಯಾವ ಕರೆ ನೀಡುತ್ತಿದ್ದರು?*
ಅಂದಿನಿಂದ ಎದ್ದೇ ಇಲ್ಲದ ಅದೇ ಯುವಕರಿಗೆ 'ಈಗಲಾದರೂ ಎದ್ದೇಳಿ ಮುದುಕರೆ' ಎನ್ನುತ್ತಿದ್ದರೇನೋ!

ಶಿವಮೊಗ್ಗ ರಮೇಶ್, ಮೈಸೂರು
*ನಿಮ್ಮ ಸಾಧನೆಯನ್ನು ಗುರುತಿಸಿದ ಜನ ನಿಮಗೊಂದು ವಾಚ್, ನಿವೇಶನ ಗಿಫ್ಟ್ ಕೊಡಲು ತೀರ್ಮಾನಿಸಿದ್ದಾರೆ. ನಿಮ್ಮ ಸಮಯ ತಿಳಿಸಿ?*
ಇಷ್ಟೆಲ್ಲ ಕನಸುಗಳು ಸೃಷ್ಟಿಯಾಗುತ್ತವೆ ಎನ್ನುವುದಾದರೆ ನಿದ್ರಾ ಸಮಯವೇ!

ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ
*ಸಾಲ ಕೊಟ್ಟು ಸಂಬಂಧ ಉಳಿಸಿಕೊಂಡವರು ಇದ್ದಾರೆಯೆ?*




ಇದ್ದಾರೆ. ಸಾಲ ಕೊಡುವುದರಿಂದಲೇ ಸಂಬಂಧ ಬೆಳೆಸಿಕೊಳ್ಳುವ ಬ್ಯಾಂಕ್ ಮ್ಯಾನೇಜರ್‌ಗಳು!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ನೆಂಟರ ಮೇಲೆ ಪ್ರೀತಿ, ಅಕ್ಕಿಯ ಮೇಲೆ ಆಸೆ ಇರುವ ಸಂದರ್ಭದಲ್ಲಿ ಮನೆಯಾಕೆ ಏನು ಮಾಡಬೇಕು?*
ಚಪಾತಿ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ ಮಠ
*ತನ್ನ ಜನ್ಮರಹಸ್ಯ ತಿಳಿದ ಕರ್ಣ ಪಾಂಡವರ ಪಾಳೆಯಕ್ಕೆ ಸೇರಿಬಿಟ್ಟಿದ್ದರೆ ಏನಾಗುತ್ತಿತ್ತು ಸಾರ್?*
ಸ್ನೇಹಿತನೊಡನೆ ಸಂಧಾನ ಮಾಡಿಕೊಂಡು ಹಸ್ತಿನಾಪುರದಲ್ಲಿ ಮೊಟ್ಟಮೊದಲ ಸಮ್ಮಿಶ್ರ ಸರ್ಕಾರ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಪ್ರೀತಿಪ್ರೇಮದ ಟರ್ನಿಂಗ್ ಪಾಯಿಂಟ್ ಯಾವುದು ರಾಮ್‌ಜೀ?*
ಕತ್ತು. ಪದೇಪದೇ ಕತ್ತು ತಿರುಗಿಸಿ ನೋಡುವುದರಿಂದಲೇ ಪ್ರೀತಿಪ್ರೇಮದ ಉದಯ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಅಲ್ಲಾ ರಾಂಜೀ, ಎಲ್ಲಿ ನೋಡಿದರೂ 'ತಾಯಿ ದೇವರು' ಎಂದೇ ಇರುತ್ತಲ್ಲ, ತಂದೆಯೇನು ರಾಕ್ಷಸನೆ?*
ಊಹೂಂ. ತಾಯಿದೇಗುಲದ ಧರ್ಮಾಧಿಕಾರಿ.

ಕೆ. ಹೊನ್ನಪ್ಪ, ಕ್ಯಾತಸಂದ್ರ
*ಕರ್ನಾಟಕದ ರಾಜಕೀಯದಲ್ಲಿ ಮಲಗಿರುವ ಸಿಂಹ ಯಾವುದು?*
ಸರ್ಕಾರ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಈಶ್ವರನಂತೆ ನಮಗೂ ಮೂರು ಕಣ್ಣಿದ್ದಿದ್ದರೆ ಏನಾಗುತ್ತಿತ್ತು?*
ಕರೆಂಟ್ ಹೋದಾಗ ಕಡ್ಡಿಪೆಟ್ಟಿಗೆಗೆ ತಡಕಾಡದೆ ಕಣ್ಣಿನಿಂದಲೇ ಕ್ಯಾಂಡಲ್ ಹಚ್ಚಬಹುದಿತ್ತು.

ಅಕ್ಷಯ ಜೈನ್, ಶ್ರವಣಬೆಳಗೊಳ
*ರಾಮ್ ಬೆಳೆದ ನೆಲ ಸುಧಾ ಆದರೆ ಕನಸುಗಳನ್ನು ಬೆಳೆಸುತ್ತಿರುವ ನಾವು ಏನು ಸಾರ್?*
ಆ ನೆಲವನ್ನು ಫಲವತ್ತಾಗಿರಿಸುವ ಅಂಶಗಳು.

ಬೂಕನಕೆರೆ ವಿಜೇಂದ್ರ, ಮೈಸೂರು
*ಬ್ರಹ್ಮ ಬುದ್ಧಿವಂತರಿಗಿಂತ ದಡ್ಡರನ್ನೇ ಹೆಚ್ಚಾಗಿ ಸೃಷ್ಟಿಸಲು ಕಾರಣ?*
ಊರಿಗೆ ಊರೇ ಹಸೆಯಲಿ ನಿಂತರೆ ಆರತಿ ಎತ್ತಲು ಜನರು ಬೇಕಲ್ಲ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಟಿವಿ ಜೋತಿಷಿಗಳಿಗೆಲ್ಲ ವೈಕುಂಠ ಏಕಾದಶಿಯಂದೇ ಮರಣದಂಡನೆ ವಿಧಿಸಿದರೆ ಹೇಗಿರುತ್ತೆ?*
ಬೇಡ. ಅಪ್ಪಟ ಸುಳ್ಳರಿಗೆ ನರಕದ ಬದಲು ಸ್ವರ್ಗ ದೊರಕಿಸಿದರೆ ಇತರರಿಗೆ ಅನ್ಯಾಯ ಮಾಡಿದಂತಾಗುತ್ತದೆ.

## ಬಹುಮಾನಿತ ಪ್ರಶ್ನೆ

ಪೇಂಟರ್ ಪಾಪು, ಸಂತೇಮರಹಳ್ಳಿ
*ಸ್ಕೂಟರ್ ಕಂಡರೆ ರೈಡ್ ಮಾಡಬೇಕೆನಿಸುತ್ತೆ; ಮೊಬೈಲ್ ಕಂಡರೆ ಮಾತಾಡಬೇಕೆನಿಸುತ್ತೆ. ಪುಸ್ತಕ ನೋಡಿದರೆ ಏಕೆ ಓದಬೇಕೆನಿಸುವುದಿಲ್ಲ?*
ಯೋಚಿಸಬೇಡಿ. ಹೀಗೆಯೇ ಮುಂದುವರೆಯಿರಿ. ರಾಜಕೀಯದಲ್ಲಿ ನಿಮಗೆ ಉಜ್ವಲ ಭವಿಷ್ಯವಿದೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಹಲೋ ಮೇಡಂ! ನೀವು ಇತ್ತೀಚೆಗೆ ಕಡಿಮೆ ಡ್ರೆಸ್ ಹಾಕಿಕೊಳ್ಳುವುದರ ರಹಸ್ಯ ಏನು?*
ಎಲ್ಲಾ ಕಡೆ ಬರ ಇರೋವಾಗ ಸಮಾಜಕ್ಕಾಗಿ ಎಲ್ಲದರಲ್ಲೂ ಉಳಿತಾಯ ಮಾಡೀಂತ ನೀವೇ ಹೇಳಿದ್ರಲ್ಲ!

ಎಚ್.ಆರ್. ದೇಸಾಯಿ, ರಾಯಚೂರು
*ಅಗ್ನಿಗೆ ತುಪ್ಪ, ಗಂಧದ ಕಟ್ಟಿಗೆಗಳನ್ನು ಅರ್ಪಿಸಿ ತೃಪ್ತಿಪಡಿಸಿದರೂ, ಕಡೆಗೆ ನಮ್ಮ ಶರೀರವನ್ನೂ ಏಕೆ ಅಪೇಕ್ಷಿಸುತ್ತದೆ?*
ಅದೂ ನಮ್ಮಂತೆಯೇ; ತುಪ್ಪವೇ ಸೂಪ್, ಗಂಧವೇ ಸ್ಟಾರ್ಟರ್; ಶರೀರವೇ ಮೇಯ್ನ್ ಕೋರ್ಸ್/ಫುಲ್ ಮೀಲ್ಸ್.

ಪೊಮ್ಮ, ಹೂವಿನಹಡಗಲಿ
*ಇತಿಹಾಸ ಕಲಿತ ಹುಡುಗಿ ಮೊದಲು ಚುಂಬಿಸಿದ ದಿನಾಂಕ, ಸ್ಥಳ, ಹೇಳಿ ಚುಂಬಿಸಲು ಒತ್ತಾಯಿಸುತ್ತಾಳೆ. ಏನು ಮಾಡಲಿ ರಾಮ್?*




'ನಾನು ಇತಿಹಾಸದ ವಿದ್ಯಾರ್ಥಿಯಲ್ಲ, ಭೂಗೋಳದ ವಿದ್ಯಾರ್ಥಿ. ಬೇಕಾದರೆ ತುಟಿಗಳ ಮೇಲ್ಮೈ ಲಕ್ಷಣಗಳನ್ನು ಹೇಳುತ್ತೇನೆ' ಎನ್ನಿ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ಈ ದೆವ್ವ ಭೂತಗಳು ಎಂದಾದರೂ ನಿಮಗೆ ಕಾಡಿದ್ದುಂಟಾ?*
ಇಲ್ಲಪ್ಪ; ನಮ್ಮೆಜಮಾನ್ರ ಅಪ್ಪಅಮ್ಮ ಉರುಫ್ ನನ್ನ ಅತ್ತೆಮಾವ ಇಬ್ಬರೂ ಒಳ್ಳೆಯವರೇ.

ಕೆ.ಯಂ. ವೀರೇಶ್, ಕೂಡ್ಲಿಗಿ
*ನಡೆ, ನುಡಿಗೆ ಶರಣರು; ಮಡಿ, ಉಡೆಗೆ ಬ್ರಾಹ್ಮಣರು; ರಾಜಕಾರಣಿಗಳು?*
ಕಡಿ, ಕುಡಿ, ಹೊಡಿ, ಬಡಿ,....

■ ರಾಮ್